# ಪಾತ್ರ ತಲ್ಲೀನ

**ನಟ, ತಾನು ನಟಿಸುವ ಪಾತ್ರವನ್ನು ಹೇಗೆ ನೋಡಬೇಕು? ಪಾತ್ರದಲ್ಲಿ ಪರಕಾಯ ಪ್ರವೇಶ ಮಾಡುವುದಾ? ಅಥವಾ ನಾನು ನಟ, ಈ ಪಾತ್ರದಲ್ಲಿ ನಟಿಸುತ್ತಿದ್ದೇನೆ ಎಂಬ ಎಚ್ಚರ ಇಟ್ಟುಕೊಂಡೇ ಆ ಪಾತ್ರಕ್ಕೆ ಜೀವ ತುಂಬಬೇಕಾ? ಈ ಮುಂತಾದ ಪ್ರಶ್ನೆಗಳನ್ನು ಮನಸಲ್ಲಿ ಏಳುವಂತೆ ಮಾಡುವ ಕಿರುಚಿತ್ರವಿದು.**

**■ ಗೌರಿ**

ನಟನೆ ಎಂದರೆ ಏನು? ಈ ಪ್ರಶ್ನೆಗೆ ಒಬ್ಬೊಬ್ಬರು ಒಂದೊಂದು ವ್ಯಾಖ್ಯಾನ ಕೊಡುತ್ತಾರೆ. ಆದರೆ ಕಲಾವಿದರಲ್ಲಿ ಬಹಳ ಜನ ಕೊಡುವ ಉತ್ತರ, 'ನಾನು ಪಾತ್ರದಲ್ಲಿ ಪರಕಾಯ ಪ್ರವೇಶ ಮಾಡ್ತೀನಿ. ಆ ಪಾತ್ರದ ನೋವು–ನಲಿವು ಎಲ್ಲವನ್ನೂ ನನ್ನದಾಗಿಸಿಕೊಂಡು ಆ ಪಾತ್ರವೇ ನಾನಾಗಿಹೋಗ್ತೀನಿ' ಎಂಬುದು. ಪಾತ್ರವೇ ತಾನಾಗಿ ಹೋಗುವುದು ಒಳ್ಳೆಯ ನಟನೆಯೇ? ಅದು ಸಾಧ್ಯವೇ? ಸಾಧುವೇ? ಈ ಎಲ್ಲದಕ್ಕೂ ಉತ್ತರ ತೀರಾ ಸರಳವೇನಲ್ಲ.

ಹೀಗೆ ಪಾತ್ರದಲ್ಲಿ ಪರಕಾಯ ಪ್ರವೇಶ ಮಾಡಿದವನ ಕಥೆಯೇ 'ಇನ್ವಾಲ್ವ್' ಕಿರುಚಿತ್ರ. ನಟನಾಗುವ ಹಂಬಲದಲ್ಲಿರುವ ಹುಡುಗನೊಬ್ಬ ನಟನೆಯ ಸ್ಪರ್ಧೆಯೊಂದಕ್ಕೆ ಸಿದ್ಧನಾಗಿರುತ್ತಾನೆ. ಅವನ ಜೊತೆಗೆ ನಟಿಸಲು ಒಬ್ಬರು ಬೇಕು. ಅವನ ಜೊತೆಗೆ ನಟನೆಯ ತಾಲೀಮಿಗೆ ಬರಬೇಕಿದ್ದ ಗೆಳೆಯ ಕೈ ಕೊಡುತ್ತಾನೆ. ಆಗ ತಾನೇ ಮುಖಕ್ಕೆ ವೇಷ ಬಳಿದುಕೊಂಡು ತಾಲೀಮು ಮಾಡಲು ತೊಡಗುತ್ತಾನೆ. ಅದೇ ಹೊತ್ತಿಗೆ ಅಲ್ಲಿಗೆ ಬರುವ ಅವನ ರೂಮ್ ಮೇಟ್ ಅನ್ನು ಒತ್ತಾಯ ಮಾಡಿ ನಿಲ್ಲಿಸಿಕೊಂಡು ಅವನ ಎದುರು ನಟನೆಯ ತಾಲೀಮು ಮಾಡಲು ಶುರುಮಾಡುತ್ತಾನೆ. ಹಾಗೆ ಮಾಡುತ್ತ ಮಾಡುತ್ತ ಪಾತ್ರದಲ್ಲಿ ಇನ್ವಾಲ್ವ್ ಆಗಿ, ತಾನು ನಟನೆ ಮಾಡುತ್ತಿದ್ದೇನೆ ಎಂಬುದನ್ನೇ ಮರೆತು ಆ ಪಾತ್ರದ ವಿವರಗಳು ತನ್ನದೇ ಎಂಬಂತೆ ವರ್ತಿಸತೊಡಗುತ್ತಾನೆ.

ಸರಳವಾದ ಕತೆಯ ಎಳೆಯಿದು. ನಟನೊಬ್ಬ ತನ್ನ ಪಾತ್ರದಲ್ಲಿ ಪೂರ್ತಿಯಾಗಿ ಇನ್ವಾಲ್ವ್ ಆದರೆ ಏನಾಗಬಹುದು ಎಂಬುದನ್ನು ಇಟ್ಟುಕೊಂಡು ಈ ಕಿರುಚಿತ್ರವನ್ನು ಹೆಣೆದಿದ್ದಾರೆ. ಅದರಾಚೆಗೆ ಮಹತ್ವದ್ದಾದದ್ದೇನೋ ಕಾಣಿಸುವ ಉದ್ದೇಶವಾಗಲಿ, ಮಹತ್ವಾಕಾಂಕ್ಷೆಯಾಗಲಿ ನಿರ್ದೇಶಕರಿಗೆ ಇಲ್ಲ. ಆದರೆ ಈ ಸರಳ ಎಳೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಹಾಗಾಗಿ ಹತ್ತು ನಿಮಿಷದ ಈ ಕಿರುಚಿತ್ರವನ್ನು ಅತ್ತಿತ್ತ ಸರಿಯದೆ ನೋಡಬಹುದು.

ಮುಖ್ಯಪಾತ್ರಧಾರಿಯ ನಟನೆ ಕೆಲವೊಮ್ಮೆ ಅತಿ ಎನಿಸುತ್ತದೆ. ಅತಿಯಾಗಿ ನಟಿಸುವುದು ಆ ಪಾತ್ರವಾಗಿರುವುದಿಲ್ಲ; ಆ ಪಾತ್ರದ ಹಾಗೆ ಕಾಣಿಸಿಕೊಳ್ಳಲು ಹವಣಿಸುತ್ತಿರುತ್ತಾನೆ. ಹಾಗಾಗಿ ಇಲ್ಲಿನ ನಟನೆಯ ರೀತಿಗೂ ಕಥೆಯ ಉದ್ದೇಶಕ್ಕೂ ಸಣ್ಣ ಅಂತರವೊಂದು ಹುಟ್ಟಿಕೊಂಡಂತಿದೆ. ಆ ಅಂತರ ಚಿತ್ರದ ಶಿಲ್ಪದಲ್ಲಿ ಹುಟ್ಟಿಕೊಂಡ ಬಿರುಕೂ ಹೌದು. ಬಾಲಿವುಡ್ ಪಾತ್ರವೊಂದನ್ನು ನೆನಪಿಸುವ ಮುಖವರ್ಣಿಕೆ ಕೂಡ ಆ ಪಾತ್ರ, ಸನ್ನಿವೇಶದಿಂದ ನಮ್ಮನ್ನು ತುಸು ದೂರವೇ ಮಾಡುತ್ತದೆ. ಕ್ರೌರ್ಯದ ಕೆಲಸ ಮಾಡುವವನು ಭೀಕರವಾಗಿಯೇ ಕಾಣಿಸಿಕೊಳ್ಳಬೇಕು ಎಂಬುದು ಕೂಡ ನಟನೆಯ ಪ್ರಪಂಚದ ಮಿಥ್‌ಗಳಲ್ಲಿ ಒಂದಲ್ಲವೇ?

ಆದರೆ ಕಥೆಯ ಎಳೆಯನ್ನು ದೃಶ್ಯ ಮಾಧ್ಯಮಕ್ಕೆ ಹೊಂದುವ ಹಾಗೆ ಅಳವಡಿಸುವಲ್ಲಿ ನಿರ್ದೇಶಕರಿಗೆ ಇದೆ ಎನ್ನುವುದಕ್ಕೆ ಈ ಕಿರುಚಿತ್ರದಲ್ಲಿ ಕೆಲವು ಪುರಾವೆಗಳಂತೂ ಇವೆ. ಹಾಗಾಗಿಯೇ ಈ ನಿರ್ದೇಶಕರ ಮುಂದಿನ ಪ್ರಯತ್ನಗಳ ಬಗ್ಗೆ ನಾವು ಭರವಸೆಯನ್ನಂತೂ ಇಟ್ಟುಕೊಳ್ಳಬಹುದು.




**ಹೆಸರು:** ಇನ್ವಾಲ್ವ್ (ಕನ್ನಡ)
**ನಿರ್ದೇಶನ:** ವೈಭವ್ ಗೌಡ
**ತಾರಾಗಣ:** ವೈಭವ್, ಅಭಿಷೇಕ್
**ಛಾಯಾಗ್ರಹಣ:** ಅರುಣ್ ಭಾಗವತ್
**ಸಂಕಲನ:** ಎಸ್.ವಿ. ಚಂದ್ರ
**ಸಂಗೀತ:** ವಿವೇಕ್ ಅಭಿಷೇಕ್

ಈ ಕಿರುಚಿತ್ರ ವೀಕ್ಷಣೆಗೆ https://bit.ly/3AQ0JfP ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.